ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಉಡುಪಿ.

ಸಿ.ಸಿಃ 787/2025
ಪ್ರಾ.ಸಾ 05

| | | |
|---|---|---|
| ಸಾಕ್ಷಿದಾರರ ಹೆಸರು | : | ರಘುನಾಥ್ ಶೆಟ್ಟಿ |
| ತಂದೆಯ ಹೆಸರು | : | ಮಾದಯ್ಯ ಶೆಟ್ಟಿ |
| ವಯಸ್ಸು | : | 51 |
| ಉದ್ಯೋಗ | : | ಆಟೋ ಚಾಲಕ |
| ವಾಸಸ್ಥಳ | : | ಬಾರ್ಕೂರು |

ದಿನಾಂಕಃ 11-08-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಅಭಿಯೋಜಕರಿಂದಃ**

ಸಾಕ್ಷಿಗೆ ನಿಪಿ-2 ನ್ನು ತೋರಿಸಲಾಗಿ ಸಾಕ್ಷಿ ದಾಖಲೆಯನ್ನು ನೋಡಿ ತನ್ನ ಸಹಿಯನ್ನು ಒಪ್ಪಿಕೊಂಡಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಅಬಕಾರಿ ಠಾಣೆಯಲ್ಲಿ ಮಾಡಿರುತ್ತೇನೆ . ನಿಪಿ 2 ರಲ್ಲಿ ಏನು ಬರೆದಿದೆ ಎಂದು ಗೊತ್ತಿಲ್ಲ . ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರು ಮಾಡಿಲ್ಲ. ಪೊಲೀಸರು ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿಲ್ಲ . ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ .

**ಮಾನ್ಯ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕು ಎಂದು ಕೋರಿದ್ದು, ಅವರ ಮನವಿಯನ್ನು ಅಂಗೀಕರಿಸಿ ಅನುಮತಿ ನೀಡಲಾಗಿದೆ.**

**ಪಾಟೀ ಸವಾಲು : ಹಿರಿಯ ಸಹಾಯಕ ಅಭಿಯೋಜಕರಿಂದ**

ದಿ 26-04-2024 ರಂದು ಬೆಳಿಗ್ಗೆ 11.30 ರ ಸುಮಾರಿಗೆ ಪೊಲೀಸರು ನನ್ನನ್ನು ಬೀಡನಗುಡ್ಡೆ ಹಾಗು ಅಲೆವೂರಿಗೆ ಹೋಗುವ ರಸ್ತೆಯಲ್ಲಿ ಇರುವ ನೀರಾ ಅಂಗಡಿಯ ಬಳಿ ಕರೆಯಿಸಿದ್ದರು ಎಂದರೆ ಸರಿಯಲ್ಲ. ನ್ಯಾಯಲಯದ ಮುಂದೆ ಇರುವ ಆರೋಪಿ ತನ್ನ ನೀರಾ ಅಂಗಡಿಯಲ್ಲಿ ಕ್ರ ಸಂ. 1) 2 ಲೀಟರ್ ಸಾಮರ್ಥ್ಯದ 4 ಬಾಟಲಿಗಳು , ಕ್ರ ಸಂ. 2) 1 ಲೀಟರ್ ಸಾಮರ್ಥ್ಯದ 23 ಬಾಟಲಿಗಳು , ಕ್ರ ಸಂ. 3) ಅರ್ಧ ಲೀಟರ್ ಸಾಮರ್ಥ್ಯದ 9 ಬಾಟಲಿಗಳು , ಕ್ರ ಸಂ. 4) 45 ಲೀಟರ್ ಸಾಮರ್ಥ್ಯದ ಕ್ಯಾನ್ ನಲ್ಲಿ 32.5 ಲೀಟರ್ ನೀರಾದ ಜೊತೆಗೆ 90 ಎಂಎಲ್ double kick fine whiskey 23 ಟೆಟ್ರಾ ಪ್ಯಾಕ್ ಗಳು ಇಟ್ಟುಕೊಂಡಿದ್ದು ಅವುಗಳ ಪೈಕಿ ಕ್ರಸಂ 1 ರಿಂದ 3 ರವರೆಗೆ ತಲಾ ಒಂದು ಬಾಟಲಿ 45 ಲೀಟರ್ ಕ್ಯಾನ್ ನಿಂದ 1 ಲೀಟರ್ 23 ಟೆಟ್ರಾ ಪ್ಯಾಕ್ ಗಳು ಪೊಲೀಸರು ವಶಪಡಿಸಿಕೊಂಡು ಬೆಳಿಗ್ಗೆ 11.30 ರಿಂದ 12.50 ರವರೆಗೆ ಮಹಜರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಈ ವಿಚಾರವಾಗಿ ದಿ 20-08-2024 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು : ಆರೋಪಿತರ ಪರ ವಕೀಲರಿಂದ ಃ ಏನೂ ಇರುವುದಿಲ್ಲ ಎಂದು ತಿಳಿಸಿರುತ್ತಾರೆ**

(ತೆರದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ರೀತ್ಯಾ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿದರು.

ಪ್ರ.ಹಿ.ಸಿ.ನ್ಯಾ.ಮತ್ತು ಸಿ.ಜೆ.ಎಂ
ಉಡುಪಿ.